

# ತುಂಬುಗುಣಗಳ ತುಂಬೆ

## ಚಿತ್ರ-ಬರಹ: ಡಾ.ಸತ್ಯ

ತುಮಕೂರಿಗೆ ಆ ಹೆಸರು ಬರಲು ಕಾರಣ ಗೊತ್ತೆ? ತುಮ್ಮ ಎಂದರೆ ತುಂಬೆ ಗಿಡ. ಹೊಲಗಳಲ್ಲಿ ಕಳೆಯಾಗಿ ಹೇರಳ ಬೆಳೆವ ತುಂಬೆ ಕಳೆಯಲ್ಲ. ತಿಳಿದವರಿಗೆ ಸಂಜೀವಿನಿ. ತುಳಸಿ ಕುಲದ ತುಂಬೆಗೆ ಲ್ಯಾಟಿನ್ ಹೆಸರು ಲ್ಯೂಕಸ್ ಸೆಫಲೋಟ್ಸ್. ಚೌಕ ಕಾಂಡದ ಕಿರು ಆಕಾರದ ತುಂಬೆ ಬೆಳೆಯಲು ಶ್ರಮವಿಲ್ಲ. ಕುಂಡದಲ್ಲಿ ನಡುಕಾಂಡದ ಒಣ ಬೀಜ ಉದುರಿಸಿ ಸಾಕು. ಹೊಸ ಸಸಿ ಸಿದ್ಧ. ತುಂಬೆ ತುಂಬ ಉಷ್ಣ. ಕಫದ ಏನೇ ತೊಂದರೆಗೆ ರಾಮಬಾಣ. ಜಂತು ಹುಳ ನೀಗಲು ತುಂಬೆರಸ ಬೆಲ್ಲ ಕೂಡಿಸಿ ಕುಡಿಸಬೇಕು. ಕಾಮಾಲೆ ರೋಗದಲ್ಲಿ ಕಣ್ಣಿಗೆ ರಸ ಹಿಂಡುವ ಸಂಪ್ರದಾಯ ತುಂಬ ಹಳೆಯದು. ಮಕ್ಕಳಲ್ಲಿ ಅಥವಾ ಹಿರಿಯರಲ್ಲಿ ಮಲಬದ್ಧತೆಗೆ ಎಲೆರಸ ಕುಡಿಸಬಹುದು. ಹಸಿವೆ ಕಾಣದ ಹಸುಳೆಗೆ ತುಂಬೆ ಉಪಕಾರಿ. ಜೇನಿಗೆ ಸಮಭಾಗ ರಸ ಕೂಡಿಸಿ ಕುಡಿಸಿ. ಕೆಮ್ಮು ದಮ್ಮು ಪರಿಹಾರಿ ರಸದ ಬಳಕೆ ಮೇಲೆ ಹೇಳಿದಂತೆ. ಮುಖ ಊದಿದ ರಕ್ತಹೀನತೆಗೆ ಸಹ ಹಿತಕಾರಿ. ರಸ ಬಳಕೆ ಯೋಗ್ಯ. ನೆಗಡಿಗೆ ರಸದ ಒಂದೆರಡು ತೊಟ್ಟು ಮೂಗಿಗೆ ಬಿಡಿ. ಮೂಗು ತೆರೆದು ಉಸಿರಾಟ ಸರಳ. ಮಂದ ಜ್ವರ, ಮರುಕಳಿಸಿದ ಜ್ವರಕ್ಕೆ ತುಂಬೆ ಗಿಡ ಕಷಾಯ ಕುಡಿಸಿ. ತುರಿಕಜ್ಜಿಗೆ, ಮೈಕೆರೆತಕ್ಕೆ ಸರಳ ವಿಧಾನ. ಎಲೆ ರಸ ಬಳದರೆ ಸಾಕು. ಇಂಥ ಮನೆಮದ್ದಿನ ಉಪಕಾರಿ ಸಸಿ ನಿಮ್ಮ ಹಿತ್ತಲಲ್ಲಿ, ಕುಂಡದಲ್ಲಿ ಇಲ್ಲವೆ?

***